ಉಮಂಡ ಘುಮಂಡ ಬರಸೆ ಸಾವನ ಮೇಹಾ''

ಸುಳಿವ ಗಾಳಿಗೇ ಉಲ್ಲಾಸ ತುಂಬುವ ಧ್ವನಿಮಾಧುರ್ಯ. ಎಂಥ ಅರಸಿಕನ ಎದೆಯಲ್ಲೂ ಶೃಂಗಾರಭಾವ ಉದ್ದೀಪಿಸುವ ರಾಗವೈಖರಿ.

ಹಾಡುತ್ತಿದ್ದ ಚಿಕ್ಕವ್ವ ನನ್ನನ್ನೇ ನೋಡುತ್ತಿದ್ದಾಳೆ ಎಂಬುದು ನನ್ನ ಸುಪ್ತ ಪ್ರಜ್ಞೆಗೆ ಗೊತ್ತಿದ್ದ ಕಾರಣ ನಾನು ತಲೆತಗ್ಗಿಸಿ ಕುಳಿತು ವೀಣೆಯನ್ನು ನುಡಿಸುತ್ತಿದ್ದೆ, ಅಷ್ಟೇ.

ಅದೆಷ್ಟು ಸಮಯ ಸರಿಯಿತೋ ಗೊತ್ತಿಲ್ಲ. ನಾದಲಹರಿ ಸ್ತಬ್ಧವಾಗಿ ಮಳೆನಿಂತು ಹೋದ ಮೇಲಿನ ಪ್ರಶಾಂತತೆ ಕೋಣೆಯಲ್ಲಿ ಆವರಿಸಿತು. ಕುಳಿತಲ್ಲಿಂದ ಎದ್ದ ಚಿಕ್ಕವ್ವ ನನ್ನ ಬಳಿ ಸಾರಿ, ''ಹೇಗಿತ್ತು ಗಾಯನ?'' ಎಂದಳು. ''ನಾನಿದುವರೆಗೆ ಇಂಥ ಸಂಗೀತವನ್ನು ಕೇಳಿರಲೇ ಇಲ್ಲ ಚಿಕ್ಕವ್ವ. ಅಷ್ಟು ಅದ್ವಿತೀಯವಾಗಿತ್ತು.'' ಸತ್ಯವನ್ನೇ ನುಡಿದೆ. ''ನಿನ್ನ ವೀಣಾವಾದನ ಹೇಗಿತ್ತು ಗೊತ್ತೆ?'' ಯಾವುದೋ ಉತ್ತರವನ್ನು ಸಿದ್ಧಪಡಿಸಿಕೊಂಡೇ ಕೇಳಿದಂತಿತ್ತು ಪ್ರಶ್ನೆ. ''ಹೇಗಿತ್ತು?'' ಮೆಲುದನಿಯಲ್ಲಿ ಕೇಳಿದೆ. ''ನಿಜ ಹೇಳಬೇಕೆಂದರೆ ನಾನೇ ನಿನ್ನ ಕೈಯಲ್ಲಿಯ ವೀಣೆಯಾಗಬೇಕಿತ್ತು ಎನಿಸಿತು. ಆಗ ನಿನ್ನ ನೀಳ ಬಲಿಷ್ಠ ಕೈಬೆರಳುಗಳು ನನ್ನ ತನುವನ್ನೆಲ್ಲ ಮೀಂಟಿ ಮಧುರ ಕಂಪನಗಳನ್ನೆಬ್ಬಿಸುತ್ತಿದ್ದವು.'' ಎಂದಳು ಚಿಕ್ಕಮ್ಮ.

ತಕ್ಷಣವೆ ಕೈಗಳಿಂದ ಕಿವಿಗಳೆರಡನ್ನು ಮುಚ್ಚಿಕೊಳ್ಳುತ್ತ, ''ಚಿಕ್ಕವ್ವಾ'' ಎಂದು ಚೀರಿದೆ. ನನ್ನ ಚೀರುವಿಕೆಯನ್ನು ಗಣನೆಗೆ ತೆಗೆದುಕೊಳ್ಳದ ಆಕೆ ಅಷ್ಟೇ ತಣ್ಣಗಿನ ಧ್ವನಿಯಲ್ಲಿ, ''ಹೌದು ಕುಣಾಲ. ನಾನು ನಿನ್ನ ಕೈಯ ವೀಣೆಯಾಗಬೇಕು. ನೀನಲ್ಲಿ ಬತ್ತೀಸ ರಾಗಗಳನ್ನು ನುಡಿಸಬೇಕು. ನೋಡಿಲ್ಲಿ. ಸ್ವಲ್ಪ ಮುಖ ಎತ್ತಿ ನನ್ನ ಕಣ್ಣಲ್ಲಿ ಕಣ್ಣಿಟ್ಟು ನೋಡು'' ಎಂದಳು.

ವೀಣೆಯನ್ನು ಪಕ್ಕಕ್ಕಿಟ್ಟು ಜಿಗುಪ್ಸೆ, ಸಿಟ್ಟಿನಿಂದ ಕಂಪಿಸುತ್ತ ಎದ್ದು ನಿಂತ ನಾನು, ''ಛೀ ಕ್ಷುದ್ರ ಹೆಣ್ಣೆ, ತಾಯಿ–ಮಗನ ಪರಮಪವಿತ್ರ ಬಾಂಧವ್ಯದ ಹಾಲ್ಗಡಲಿಗೆ ವಿಷಯವಾಸನೆಯ ವಿಷ ಬೆರೆಸುವೆಯಾ? ನಿನ್ನನ್ನು ನೋಡಲು ಅಸಹ್ಯವೆನಿಸುತ್ತದೆ. ಈ ಕ್ಷಣ, ಈ ರಾಜ್ಯದಿಂದ, ತೊಲಗು'' ಎಂದು ಕಿಡಿಕಾರಿದೆ.

ಹೆಡೆ ತುಳಿಸಿಕೊಂಡ ಸರ್ಪದಂತೆ ಭುಸುಗುಡುತ್ತ ಕಾಲಿನಿಂದ ನೆಲವನ್ನು ಅಪ್ಪಳಿಸಿದ ಆಕೆ, ''ಬಯಸಿ ಬಂದ ಹೆಣ್ಣನ್ನು ಅಪಮಾನಿಸಿ ಕಳುಹಿಸುವ ಏ ಕ್ರಿಮಿಯೆ, ಇನ್ನೊಂದು ಕ್ಷಣ ಇಲ್ಲಿರಲಾರೆ. ನನ್ನನ್ನಷ್ಟೇ ಅಲ್ಲ, ನೀ ಯಾರನ್ನೂ ನೋಡದಂತೆ ಮಾಡುವೆ. ನಿನ್ನ ಕಣ್ಣುಗಳನ್ನು ಕಾದ ಸಲಾಕೆಯಿಂದ ಕೀಳಿಸದಿದ್ದರೆ ನಾನು ತಿಷ್ಯರಕ್ಷಿತಾಳೇ ಅಲ್ಲ'' ಎಂದು ಸಿಡಿಲನುಡಿಗಳನ್ನಾಡಿ ರೋಷಾವೇಷದಿಂದ ಬಿರು



ಹೆಜ್ಜೆಗಳನ್ನಿಡುತ್ತ ಸಂಗೀತಾಲಯದಿಂದ ಹೊರ ನಡೆದಳು.

ಮಳೆ ನಿಂತಿತ್ತು. ಕತ್ತಲಾವರಿಸುತ್ತಿತ್ತು. ನಾನು ದಿಗ್ಭ್ರಾಂತನಾಗಿ ಆಕೆ ಹೋದ ಬಾಗಿಲತ್ತ ನೋಡುತ್ತಲೇ ನಿಂತಿದ್ದೆ.

## ಕಾಚನಮಾಲಾ

ಏಕಕಾಲಕ್ಕೆ ಸಾವಿರ ಸಿಡಿಲುಗಳು ಎದೆಗಪ್ಪಳಿಸಿದಂತಾಗಿದೆ. ಯಾವ ಅಡೆತಡೆಗಳೂ ಇಲ್ಲದೆ ಸುಖ ಸಮುದ್ರದ ಅಲೆಗಳ ಮೇಲೆ ತೇಲುತ್ತಿದ್ದ